

# ಟಿ.ಎಸ್. ನಾಗರಾಜ ಶೆಟ್ಟಿ ಅವರ ಎರಡು ಪದ್ಯಗಳು

## ನರಿಯಣ್ಣನ ಅಂಗಡಿ

ದಿನಸಿಯ ಅಂಗಡಿ ಬೇಸರವೆನಿಸಿ
ಬದಲಿಸಬಯಸಿದ ನರಿಯಣ್ಣ
ಹಣ್ಣಿನ ಅಂಗಡಿ ತೆರೆಯುವುದೇ ಸರಿ
ಎನ್ನುವ ಯೋಚನೆ ಬಂತಣ್ಣ

ಸಗಟಿನ ಮಳಿಗೆಗೆ ಕೂಡಲೆ ಹೊರಟು
ಖರೀದಿ ಮಾಡಿದ ತನಿ ಹಣ್ಣ
ಹಲಗೆಯ ಜೋಡಿಸಿ ಹಣ್ಣನು ಪೇರಿಸಿ
ಹುಬ್ಬೇರಿಸಿದ ನೋಡಣ್ಣ!

ಚೀಲಕೆ ಕೈಯನು ಹಾಕಿದ ಕೂಡಲೆ
ಚುಚ್ಚಿತು ಅನಾನಸ್ ಜುಟ್ಟು
ಪರಂಗಿ ಹಣ್ಣು ಮೇಲಿಂದುರುಳಿ
ಆಯಿತು ಎಲ್ಲಕು ಬಲುಪೆಟ್ಟು!

ರಾತ್ರಿಯ ವೇಳೆ ಹೆಗ್ಗಣ ಬಂದು
ನುಣ್ಣಗೆ ತಿಂದವು ಕರಬೂಜ
ಹಣ್ಣುಗಳೆಲ್ಲವ ಎಂಜಲು ಮಾಡಿ
ನೆಲದ ತುಂಬ ಬರಿ ಬೀಜ!

ಗಿರಾಕಿ ಜನರು ಬೆಲೆಯನು ಕೇಳುತ
ಬರಿ ಚೌಕಾಸಿಯ ಮಾಡಿದರು
ಕೊಳ್ಳಲೆ ಇಲ್ಲ ಕರುಬುತ ಎಲ್ಲ
ಜಾಗವ ಖಾಲಿ ಮಾಡಿದರು !

ದಿನದಿನ ಕಳೆಯಲು ಕೊಳೆತವು ಹಣ್ಣು
ನರಿಯಣ್ಣನಿಗಾಯಿತು ಬಲು ನಷ್ಟ
ಇರುವುದ ಬಿಟ್ಟು ಇರದುದಕಾಶಿಸಿ
ಅನುಭವಿಸಿದನು ಬಲು ಕಷ್ಟ !

## ತರಕಾರಿ ಮಾರ್ಕೆಟ್ಟು

ಪ್ರಾಣಿಗಳೆಲ್ಲ ಬಯಲಲಿ ಸೇರಿ
ತೆರೆದುವು ತರಕಾರಿ ಮಾರ್ಕೆಟ್ಟು
ಜನಗಳು ಎಲ್ಲ ಅಚ್ಚರಿಪಟ್ಟರು
ಬಾಯಿಯ ಮೇಲೆ ಬೆರಳಿಟ್ಟು!

ಅಚ್ಚ ಹಸುರಿನ ಸ್ವಚ್ಛ ಬೆಂಡೆಯ
ಮಳಿಗೆಯನಿಟ್ಟವು ಜೀರುಂಡೆ
ಲಂಬೂ ಲಂಬೂ ಪಡುವಲ ಕಾಯಿಯ
ಹೊತ್ತೆ ತಂದುವು ಹಾವಿನ ಹಿಂಡೆ!

ಕೆಂಪು ಕೆಂಪಿನ ಕ್ಯಾರೆಟ್ಟನ್ನು
ಸೊಂಪಾಗಿಟ್ಟವು ಬಿಳಿಯ ಮೊಲ
ಇಲಿಗಳ ದಂಡು ಆಲೂಗಡ್ಡೆಯ
ತರಲು ಹೊರಟವು ತೊರೆದು ಬಿಲ

ಜಿಂಕೆಗಳೆಲ್ಲ ಅಂಕೆಯೆ ಇಲ್ಲದೆ
ಬಿಂಕದಿ ತಂದವು ಮೂಲಂಗಿ
ಹುರಳೀಕಾಯಿಯ ಪೇರಿಸಿ ಉದ್ದಕೆ
ಕರಡಿಯು ಧರಿಸಿತು ಮೇಲಂಗಿ!

ಕಾಡಿನ ಒಡೆಯ ಸಿಂಹ ಮೆಚ್ಚುತ
ತಟ್ಟಿತು ಚಪ್ಪಾಳೆಯನು
ಮೇಘರಾಜನು ಹರಸುತ ಒಳಿತನು
ಸುರಿಸಿದನಾಗಲೆ ಹೂಮಳೆಯನ್ನು!

